ಆ) ನಗರಪಾಲಿಕೆಯವರು ಈ ಪುಸರ್ ವಿಸರ್ಜಿ ಮಾಡುವಾಗ್ಗೆ ಭಾರಿ ಲೋಪದೋಷಗಳು ನಡೆದಿರುವುದು, ಸಾರ್ವಜನಿಕರಿಂದ ನಗರ ತಾಸಕರಿಂದ ನಗರಸಭಾ ಸದಸ್ಯರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಬಗ್ಗೆ ಸರ್ಕಾರದವರ ಧೋರಣೆಯೇನು ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಸಂಸದೀಯ, ವ್ಯವಹಾರಗಳು ಆಹಾರ ಮಂತ್ರಿಗಳು).—

ಅ) ಬಂದಿದೆ.

ಆ) ಈ ಬಗ್ಗೆ ಕೆಲವರಿಂದ ದೂರುಗಳು ಬಂದಿವೆ.

ಇ) ಆಗಿದೆಯೆನ್ನಲಾದ ಲೋಪದೋಷಗಳನ್ನು ಸರಿಪಡಿಸಲು ನಗರಪಾಲಿಕೆಯ ಆಯುಕ್ತರಿಗೆ ಹಾಗೂ ತೆರಿಗೆ ಮೇಲ್ಮನವಿ ಸಮಿತಿಗೆ ಅವಕಾಶ / ಅಧಿಕಾರ ಇರುವುದರಿಂದ ಈ ಸಮಸ್ಯೆಗಳನ್ನು ಮಹಾನಗರಪಾಲಿಕೆಯ ಪ್ರಾಧಿಕಾರಗಳೇ ಬಗೆಹರಿಸಬೇಕು.

ಹಿಟ್ಟಣಗಿ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

೧೮೫ (೪೦೯ ಸಿ) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮವಿಾಣಾಭಿವೃದ್ಧಿ, ವಸತಿ ಮಂತ್ರಿ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ''ಹಿಟ್ಟಣಗಿ'' ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಹೋಗಲಾಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಮೇಲ್ಕಂಡ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಯಾವಾಗ ಮಂಜೂರು ಮಾಡಲಾಯಿತು ?

ಈ) ಅದು ಪೂರ್ತಿಗೊಳ್ಳಲು ಇನ್ನು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮವಿಾಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು).—

ಅ) ಬಂದಿದೆ.

ಆ) ಈ ಗ್ರಾಮದಲ್ಲಿ ೪ ಯಂತ್ರಚಿ ಕೊಳವೆ ಬಾವಿಗಳಿವೆ. ಗಂಟೆಗೆ ೫೬೭೫ ಗ್ಯಾಲನ್ ಇಳುವರಿ ಯುಳ್ಳ ಬಾವಿಗೆ ವಿದ್ಯುತ್ ಮೋಟಾರ್ ಅಳವಡಿಸಿ, ಕೆರು ನೀರು ಸರಬರಾಜು ಯೋಜನೆಯ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಉಳಿದ ೩ ಕೊಳವೆ ಬಾವಿಗಳ ಪೈಕಿ ೨ಕ್ಕೆ ಕೈಪಂಪು ಅಳವಡಿಸಿ, ನೀರನ್ನು ಕೊಡಲಾಗುತ್ತಿದೆ. ಮತ್ತೊಂದಕ್ಕೆ ಶೀಘ್ರದಲ್ಲಿಯೇ ಕೈಪಂಪು ಅಳವಡಿಸಲಾಗುವುದು.

ಇ) ದಿನಾಂಕ ೩೦-೧೦-೧೯೭೯ರಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಯನ್ನು ಮಂಜೂರು ಮಾಡಲಾಯಿತು.

ಈ) ಮುಂದಿನ ವರ್ಷದ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಮುರಗೋಡ ಗ್ರಾಮದಲ್ಲಿ ಗ್ರಾಮವಿಾಣ ಬ್ಯಾಂಕ್ ಕಟ್ಟಡ ಕಟ್ಟುವ ಬಗ್ಗೆ

೧೮೬ (೪೧೦ ಸಿ) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮವಿಾಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ (ಭೂ ಸೇವಾ ನಿಗಮ ದವರು) ಕಟ್ಟುತ್ತಿರುವ ಗ್ರಾಮವಿಾಣ ಬ್ಯಾಂಕ್ ಕಟ್ಟಡ ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆದನ್ನು ಪೂರ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ಹಾಗೂ ಆದನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು)—

ಆ) ಹೌದು.

ಆ) ಸದರಿ ಕಟ್ಟಡವನ್ನು ಆಹಾರ ಧಾನ್ಯಗಳನ್ನು ಪಾರಾಟ ಮಾಡಿದ ಹೆಚ್ಚುವರಿ ಉಶ್ಣತ್ವೆಯಿಂದ ಮುಗಿಸಲು ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ) ಬೆಳಗಾಂವ್, ಇವರಿಗೆ ತಿಳಿಸಿರುತ್ತದೆ. ಒಂದುವೇಳೆ ಸಾಧ್ಯವಾಗದಿದ್ದಲ್ಲಿ, ಈ ಕಾಮಗಾರಿಯನ್ನು ೧೯೮೨–೮೫ನೇ ಸಾಲಿನ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಯೋಜನೆಯ ಕೆಲಸ ಯೋಜನೆಯಲ್ಲಿ ಅಳವಡಿಸಿಕೊಂಡು ಪೂರ್ತಿಗೊಳಿಸಲು ಆದೇಶ ಕೊಟ್ಟಿರುತ್ತದೆ.

ಸಿರ್ಸಿ ಸಿದ್ದಾಪುರ ಕೊಳವೆ ಬಾವಿಗಳ ಬಗ್ಗೆ

೧೪೭೭ (೧೫ ಸಿ) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮಿಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಆ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಿದ್ದಾಪುರದಲ್ಲಿ ಕೊಳವೆ ಬಾವಿಗಳು ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಪ್ರದೇಶದಲ್ಲಿ ತೆರೆದ ಬಾವಿಗಳನ್ನು ತೋಡಲು ಸರಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಆ) ಬಂದಿದೆ.

ಆ) ಎಲ್ಲಿ ಕೊಳವೆ ಬಾವಿಯು ವಿಫಲವಾಗಿದೆಯೋ ಅಲ್ಲಿ ಮತ್ತೊಂದು ಕೊಳವೆ ಬಾವಿ ಸ್ಥಳವನ್ನು ಗುರುತಿಸಿ ಯಶಸ್ವಿ ಕೊಳವೆ ಬಾವಿಯನ್ನು ಕೊರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ವಿಫಲವಾದ ೬ ಇಂಗಲ ಕೊಳವೆ ಬಾವಿಗಳನ್ನು ಪುನರ್ ತನಿಖೆ ಮಾಡಿ ಪುನರುಜ್ಜೀವನ ಮಾಡಬುಹುದಾದ ಎಲ್ಲ ಕೊಳವೆ ಬಾವಿಯನ್ನು ಳ್ಳ ವ್ಯಾಸದ ಕೊಳವೆ ಬಾವಿ ಕೊರೆಯುವ ಯಂತ್ರದಿಂದ ಆಳ ಮಾಡಿ ವಿಫಲವಾದ ಕೊಳವೆ ಬಾವಿಯನ್ನು ಯಶಸ್ವಿ ಮಾಡಲು ಪ್ರಯತ್ನ ಮಾಡಲಾಗಿದೆ. ಎಲ್ಲಿ ಕೊಳವೆ ಬಾವಿಗಳು ಯಶಸ್ವಿಯಾಗುವುದಿಲ್ಲವೋ ಅಲ್ಲಿ ತೆರೆದ ಬಾವಿ ತೆಗೆಯಲು ಕ್ರಮ ಕೈಗೊಳ್ಳಲಾಗುತ್ತದೆ.

ಬೆಂಗಳೂರಿಂ ಮಹಾ ನಗರ ಪಾಲಿಕೆಯು ತೆರಿಗೆ ಹೆಚ್ಚಿಸಿರುವ ಬಗ್ಗೆ

೧೪೮೮ (೫೫೫) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ, ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ಬೆಂಗಳೂರು ಮಹಾ ನಗರ ಪಾಲಿಕೆಯವರು ಬೆಂಗಳೂರು ಮನೆ ಕಂದಾಯವನ್ನು ಹೆಚ್ಚಿಸಲು ನೋಟಿಸುಗಳನ್ನು ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ತೆರಿಗೆಯ ಬಗ್ಗೆ ಜನತೆಯ ಮುಖ್ಯ, ಸಾರ್ವಜನಿಕ ಸಂಘಟನೆಗಳ ಮುಖ್ಯ ತೀವ್ರ ಆಕ್ಷೇಪ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈಗಿರುವ ಕಂದಾಯವನ್ನು ಸರಿಯಾಗಿ ವಸೂಲಿ ಮಾಡಿದಲ್ಲಿ ಮನೆ ಕಂದಾಯವನ್ನು ಸದ್ಯದಲ್ಲಿ ಹೆಚ್ಚಿಸಲೇಬೇಕಾಗಿಲ್ಲವೆಂದು ಸರಕಾರದವರು ಒಪ್ಪುತ್ತಾರೆಯೇ?

ಈ) ಜನತೆಯ ಅಭಿಪ್ರಾಯಕ್ಕನುಗುಣವಾಗಿ ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?